**<u>ಸಾಕ್ಷಿಯನ್ನು ದಿನಾಂಕ 05-01-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ.ಎನ್.ಎಸ್ ವಕೀಲರಿಂದಃ</u>**

1. ವಾದಿಯರು ನನ್ನ ಪರಿಚಯಸ್ಥರು. ವಾದಿಯರ ಸಹೋದರಿ ಲಲಿತಾ ಎಂಬುವವರ ಮಗಳು ರೂಪ ಎಂಬಾಕೆಯನ್ನು ನನ್ನ ಮಗ ಮೈಲಾರಿಗೆ ಮದುವೆ ಮಾಡಲಾಗಿದೆ ಎಂದರೆ ಸರಿ. ಹಾಗಾಗಿ ವಾದಿ ನನ್ನ ಸಂಬಂಧಿಕರು ಎಂದರೆ ಸರಿ. ವಾದಿಯರು ನನಗೆ 40 ವರ್ಷಗಳಿಂದ ಗೊತ್ತು. ಸಾಕ್ಷಿ ಪುನಃ ಅವರು ನಮ್ಮ ಪಕ್ಕದ ಮನೆಯವರು ಎನ್ನುತ್ತಾರೆ.

2. ದಾವಾ ಸ್ವತ್ತಿನ ವಿಷಯವಾಗಿ ನಡೆದ ಗಲಾಟೆಯ ಸಂಬಂಧ ನನ್ನ ಹಾಗೂ ಪ್ರತಿವಾದಿಯರು ಮತ್ತು ನನ್ನ ಮಗ ಮೈಲಾರಿ, ಸೊಸೆ ರೂಪ, ನನ್ನ ಸಹೋದರಿ ಸಾವಿತ್ರಿ, ಪುಷಲತಾ ಮತ್ತು ರವಿಕುಮಾರ ಎಂಬುವವರ ಮೇಲೆ ಪೊಲೀಸ್ ದೂರು ದಾಖಲಾಗಿದೆ ಎಂದರೆ ಸರಿ. ಈ ದಾವೆಯನ್ನು ವಾದಿ ನಿವೇಶನದ ವಿಷಯವಾಗಿ ದಾಖಲಿಸಿದ್ದಾರೆ. ಅವರು ಏನು ಪರಿಹಾರ ಕೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

3. ವಾದಿಯರು ಮನೆ ಕಟ್ಟಿರುವ ಜಾಗ ಅವರ ತಂದೆಯದ್ದು ಎಂದರೆ ಸರಿ. ಮನೆಯನ್ನು 15 ½ x30 ಅಡಿ ವಿಸ್ತೀರ್ಣದಲ್ಲಿ ಕಟ್ಟಲಾಗಿದೆ. ದಾವಾ ಸ್ವತ್ತಿನ ಪಕ್ಕದಲ್ಲಿರುವ ಪ್ರತಿವಾದಿಯರ ಮನೆ ಎಷ್ಟು ವಿಸ್ತೀರ್ಣ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಅವರ ಮನೆ ಸಹ 15

½x30 ಅಡಿ ವಿಸ್ತೀರ್ಣ ಇದೆ ಎನ್ನುತ್ತಾರೆ. ಪ್ರತಿವಾದಿಯರ ಮನೆಯ ಹಿಂಭಾಗದಲ್ಲಿ 4 ನೇ ಪ್ರತಿವಾದಿ ಒಂದು ಶೆಡ್ ಕಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರ ಮನೆಯ ಹಿಂಭಾಗಕ್ಕೆ ನಾನು ಹೋಗಿಲ್ಲ. ವಾದಿ ತಮ್ಮ ಮನೆಯ ಹಿತ್ತಲಿನ ಜಾಗದಲ್ಲಿ ತೆಂಗು ಮತ್ತು ಮಾವಿನ ಮರ ಬೆಳೆದಿದ್ದಾರೆ. ಸದರಿ ಹಿತ್ತಲಿನ ಜಾಗ 30x90 ಅಡಿ ವಿಸ್ತೀರ್ಣ ಇದೆ. ಸದರಿ ಖಾಲಿ ಜಾಗಕ್ಕೆ ಸಂಬಂಧಪಟ್ಟಂತೆ ನಾನು ನಗರ ಸಭೆ ದಾಖಲೆಗಳನ್ನು ನೋಡಿಲ್ಲ. ವಾದಿಯರ ಹಿತ್ತಲಿನಲ್ಲಿ ಬೆಳೆದಿರುವ ತೆಂಗು ಮತ್ತು ಮಾವಿನ ಮರಗಳು ಪ್ರತಿವಾದಿಯರ ಮನೆಯ ಹಿಂಭಾಗದಲ್ಲಿ 4 ನೇ ಪ್ರತಿವಾದಿ ಕಟ್ಟಿರುವ ಶೆಡ್ಡಿನ ಕಡೆಗೆ ಬಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ.

4. ವಾದಿಯರ ಹಿತ್ತಿಲಿನಲ್ಲಿರುವ ತೆಂಗು ಮತ್ತು ಮಾವಿನ ಮರಗಳು ಪ್ರತಿವಾದಿಯರ ಮನೆಯ ಹಿತ್ತಲಿನ ಕಡೆಗೆ ವಾಲಿದ್ದವು ಮತ್ತು ತೆಂಗಿನ ಕಾಯಿ ಮತ್ತು ಗರಿ ಪ್ರತಿವಾದಿಯರು ಕಟ್ಟಿರುವ ಶೆಡಿಗೆ ಬೀಳುತ್ತಿತ್ತು ಎಂದರೆ ಸಾಕ್ಷಿ ಗರಿಗಳು ಬೀಳುತ್ತಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮರಗಳಿಂದ ತೊಂದರೆಯಾಗುತ್ತಿದ್ದ ಕಾರಣ ಅವುಗಳನ್ನು ಕತ್ತರಿಸುವಂತೆ ಪ್ರತಿವಾದಿಯರು ವಾದಿಯರಿಗೆ ಕೇಳಿದ್ದರೂ ಮತ್ತು ಆ ಸಂಬಂಧ ನಗರ ಸಭೆಗೂ ಅರ್ಜಿ ಕೊಟ್ಟಿದ್ದರೂ ಎನ್ನುವುದು ನನಗೆ ಗೊತ್ತಿಲ್ಲ. ನಗರ ಸಭೆಯವರು ಸಹ ಬಾಗಿರುವ ಮರಗಳನ್ನು ಕತ್ತರಿಸುವಂತೆ ವಾದಿಯರಿಗೆ ತಿಳುಹಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ವಾದಿಯರು ನಗರ ಸಭೆಯ ಆದೇಶವನ್ನು ಪಾಲಿಸದೆ ಮತ್ತು ಪ್ರತಿವಾದಿಯರ ಮನವಿಯನ್ನು ಲೆಕ್ಕಿಸದೆ ಇದ್ದ ಕಾರಣ ಹಾಗೂ ಅವರ ಜಾಗದ ಕಡೆ ಬಾಗಿದ ಮರಗಳಿಂದ ತೊಂದರೆ ಆಗುತ್ತಿದ್ದರಿಂದ ಅವರು ವಾದಿಯರ ವಿರುದ್ದ ಈ ನ್ಯಾಯಾಲಯಕ್ಕೆ ಪ್ರತ್ಯೇಕ ದಾವೆ ಸಲ್ಲಿಸಿದ್ದಾರೆ ಎನ್ನುವುದು

ನನಗೆ ಗೊತ್ತಿಲ್ಲ. ಸತ್ಯಾಂಶ ಗೊತ್ತಿದ್ದರೂ ಸಹ ವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯರೇ ಪ್ರತಿವಾದಿಯರಿಗೆ ತೊಂದರೆ ಕೊಟ್ಟು ಈ ಸುಳ್ಳು ದಾವೆ ದಾಖಲಿಸಿರುವ ವಿಷಯ ನನಗೆ ಗೊತ್ತಿದ್ದರೂ ಸಹ ವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯರ ಆಸ್ತಿಗೆ ಯಾವತ್ತು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ತಾವು ಕಟ್ಟಿರುವ ಮನೆ ಮತ್ತು ಅದರ ಹಿಂಭಾಗದಲ್ಲಿರುವ ಖಾಲಿ ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ಈ ಹಿಂದೆ ಇದ್ದರೂ ಈಗ ಇಲ್ಲ ಎನ್ನುತ್ತಾರೆ. ವಾದಿಯರು ಈಗಲೂ ತಮ್ಮ ಖಾಲಿ ಜಾಗದಲ್ಲಿ ಮರಗಳನ್ನು ಬೆಳೆಸಿ ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಂಬಂಧಿಕರಾದ ವಾದಿಯರು ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**